ಸುಳ್ಳೇ? ಇದು ನಿಜಕ್ಕೂ ಸುಳ್ಳೆಂದು ಕಾರ್ಡು ಸಾಬೀತು ಪಡಿಸಲು ಯತ್ನಿಸುತ್ತಿರಬಹುದು.. ಜೀವವಿಲ್ಲದ ತುಣುಕು ಕಾಗದ ನನ್ನ ಇರುವನ್ನು ಸಾಬೀತು ಪಡಿಸಬೇಕೆ...? ಎಂದು ತನ್ನಷ್ಟಕ್ಕೆ ತಾನೇ ಹೇಳಿಕೊಂಡು ಸಮಾಧಾನಿಯಾಗುತ್ತಿದ್ದ. ಆತ ಓಡಾಡುವಾಗ ಪ್ರಶ್ನೋತ್ತರಗಳ ಒಂದು ಪುಟ್ಟ ನೋಟು ಪುಸ್ತಕದಂತೆ ಕಾಣುತ್ತಿದ್ದ.

ಮಲಗಿದರೆ ಸಾಕು ನಿದ್ದೆಯಲ್ಲಿ ಕಾರ್ಡು ಬಂದಂತೆ ಕನಸು. ಕಾರ್ಡಿನಲ್ಲಿ ಫೋಟೊವೇ ಇರುತ್ತಿರಲಿಲ್ಲ. ಒಮ್ಮೊಮ್ಮೆ ಫೋಟೊ ಇರುತ್ತಿತ್ತು, ಹೆಸರು ಮತ್ತು ಊರಿನ ವಿಳಾಸ ಇರುತ್ತಿರಲಿಲ್ಲ. ಕೆಲವೊಮ್ಮೆ ಊರಿನ ವಿಳಾಸ, ಹೆಸರು ಇದ್ದರೆ ತನ್ನ ಫೋಟೊವೇ ಇರುತ್ತಿರಲಿಲ್ಲ. ಕನಸು ಕಳೆದ ಎಚ್ಚರವಾಗಿ ಕೂತಾಗಲೆಲ್ಲಾ ಕಂಗಾಲಾಗಿರುತ್ತಿದ್ದ.

ಈ ನಡುವೆ ಕೆಲಸದಲ್ಲಿ ಮನಸನ್ನಿಡುವುದು ಕಷ್ಟವಾಗುತ್ತಿತ್ತು.

ಟ್ರ್ಯಾಕ್ಟ್ರು ಓಡಿಸುವುದಕ್ಕೆ ಮನಸಿಲ್ಲದೆ ಸುಮ್ಮನೆ ಒಂದು ಕಡೆ ನಿಲ್ಲಿಸಿ ಕೂತಿರುತ್ತಿದ್ದ. ತನಗೆ ತಾನೇ ಏನೇನೊ ಹೇಳಿಕೊಳ್ಳುತ್ತಿದ್ದ. ಆಗಾಗ ತನ್ನ ಬೆರಳುಗಳನ್ನು ನೋಡಿಕೊಳ್ಳುತ್ತಿದ್ದ. ಕಲ್ಲಿಗೆ ಹಾಕಿ ಉಜ್ಜುತ್ತಿದ್ದ. ಪದೇ ಪದೇ ಕೈ ತೊಳೆದುಕೊಳ್ಳುತ್ತಿದ್ದ.

* * *

ಸುಮಾರು ಐದು ಗಂಟೆಗೆ ಡಾಕ್ಟರ್ ಬಂದರು. ಜನವೋ ಜನ. ನಂದೀಶನನ್ನು ಮುಂದೆ ಬಿಟ್ಟು, ತಾನು ಹಿಂದಿನಿಂದ ಸೇರಿಕೊಂಡಳು. 'ಸಾ ನಮ್ಮನೆಯವರಿಗೆ ತುಂಬಾ ಹುಷಾರಿಲ್ಲ... ಶಿವಮೊಗ್ಗದ ನಂಜಪ್ಪ ಆಸ್ಪತ್ರೆಗೆ ಹಾಕೊಂಡಿವಿ. ಆದಷ್ಟು ಬೇಗ ಆಪರೇಷನ್ ಮಾಡ್ಬೇಕು ಅಂದಾರೆ. ಬಾಳ ದುಡ್ಡು ಬೇಕು ಅಂದ್ರು. ಅದೇನು ಆಯುಷು ಅಂತ ಇದೆಯಂತೆ. ಗೌರ್ಮೆಂಟ್ ಆಸ್ಪತ್ರೆಗೆ ಬರೆಸ್ಕೊಂಡು ಬನ್ನಿ. ಮಾಡ್ತೀವಿ ಅಂದ್ರು...' ಎಂದು ಅಲವತ್ತುಕೊಂಡಳು.

'ಏನೂ ರೆಕಾರ್ಡ್ ಇಲ್ಲದೆ ಹೆಂಗಮ್ಮ ಕೊಡೋದು. ಅವೆಲ್ಲಾ ಇರೋದು ಬಡವ್ರಿಗೆ' ಎಂದು ಡಾಕ್ಟರ್ ಕೈ ಚೆಲ್ಲಿದರು. 'ಕಾರ್ಡ್ ಇದ್ರೆ ಮಾತ್ರ ಬಡವ್ರಾ ಸಾರ್.. ನಮ್ಮನ್ನು ನೋಡಿದ್ರೆ ಗೊತ್ತಾಗಲ್ವ ಸರ್ ಬಡವ್ರು ಅಂತ...' ಗಿರಿಜಿ ಕಣ್ಣೀರು ತಂದಳು. 'ಬಡವ್ರು ಅಂತ ನೀವು ಹೇಳಂಗಿಲ್ಲ ಕಾರ್ಡೇ ಹೇಳಬೇಕು...' ಅನ್ನುವಂತಿತ್ತು ಡಾಕ್ಟರ್ ಮಾತು. 'ಮೆಗ್ಗಾನ್ ಆಸ್ಪತ್ರೆಗೆ ಸೇರಿಸಿ. ಅದು ಸರ್ಕಾರದ್ದು, ಅಲ್ಲೂ ಒಳ್ಳೆ ಡಾಕ್ಟರ್ ಇದಾರೆ...' ಎನ್ನುವ ಸಲಹೆ ನೀಡಿದರು.

ತುಂಬಾ ಹೊತ್ತು ಡಾಕ್ಟರ್ ಮುಂದೆ ನಿಂತೇ ಇದ್ದಳು. ಇವಳನ್ನು ದಾದು ಮಾಡದೆ ಸ್ವಲ್ಪ ಹೊತ್ತಿನ ಬಳಿಕ ಅವರೇ ಎದ್ದು ಹೋದರು.

ಬೇರೆ ದಾರಿ ಕಾಣದೆ ಗಿರಿಜಿ ವಾಪಸ್ ಹೊರಟಳು. ಅವಳು ಕೈಯಲ್ಲಿದ್ದ ಬಿಳಿ ಹಾಳೆ ಇಡೀ ದಿನದ ಬೆವರು ಕುಡಿದು ಅದಾಗಲೇ ಸತ್ತು ಹೋಗಿತ್ತು. ನಂದೀಶನು ಅಸಹಾಯಕನಾಗಿ ಗಿರಿಜಿ ಜೊತೆ ಹೆಜ್ಜೆ ಹಾಕಿದ.

* * *



ಅವತ್ತು ಹೊಲ ಹೊಡೆಯುವಾಗ ಅರ್ಧಕ್ಕೆ ಬಿಟ್ಟು ಬಂದವನು ಮನೆಯಲ್ಲಿ ಮಾತಿಲ್ಲದೆ ಕೂತಿದ್ದ. ಗಿರಿಜಿ ತೀರ್ಥಹಳ್ಳಿಗೆ ಹೋಗಿ ಬಂದಿದ್ದಳು. ರೇಷನ್ ಕಾರ್ಡು.. ಮಾಡಿಸಲು ಕೊಟ್ಟು ಬಂದಿರುವ ಸುದ್ದಿ ಹೇಳಿದಳು. ನಿಮ್ದು ಆಮೇಲೆ ನೋಡಿಕೊಂಡ್ರಾಯ್ತು ಎನ್ನುತ್ತಾ ಪಾತ್ರೆಗಳನ್ನು ಲಡಬಡಾಯಿಸಿದಳು. ಹೆಂಡತಿ ಕೂಡ ತನ್ನನ್ನು ತನ್ನ ಜಗತ್ತಿನಿಂದ ಹೊರಹಾಕಿದಳು ಅನಿಸಿತು. ಕಾರ್ಡು ಇಲ್ಲದ ಕಾರಣಕ್ಕೆ ಈ ಊರಿನೊಂದಿಗೆ ಯಾವುದೇ ಸಂಬಂಧವಿಲ್ಲದಂತಿರುವಾಗ ಈಗ ಹೆಂಡತಿ ಕೂಡ ಅದೇ ದಾರಿ ಹಿಡಿದಿದ್ದಾಳೆ. ನಾಳೆ ರೇಷನ್ ಕಾರ್ಡಿನಲ್ಲಿ ಅವಳದೊಂದೇ ಹೆಸರು, ಅವಳ ಫೋಟೊ ಮಾತ್ರ. ನನ್ನನ್ನು ಮನೆಯಿಂದ ಹೊರಹಾಕಿದಂತೆ. ಮನೆಯಲ್ಲಿ ಇಬ್ಬರು.. ಕಾರ್ಡಿನಲ್ಲಿ ಒಬ್ಬರು.. ಅವನ ಹೊಟ್ಟೆಯಲ್ಲಿ ಸಂಕಟವಾಗಿತ್ತು. ಏನೂ ಮಾತಾಡದೇ